168

ಮೈಸೂರ ಗಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 19, ಸನ್ 1907.

II ನೆ ಭಾಗ

ಇಂಡ್ಯೂಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆರೀರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್‌ನಾಮೆ.

ತಾರೀಖು 15ನೆ ಡಿಸಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಪಡಿಸುವದೇನಂದರೆ, ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕಿನ 170 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಸಾಗರ ಮೊಕ್ಕಾಂನಲ್ಲಿ ಬರುವ ತಿಂಗಳ (ಜನವರಿ 1908) 20ನೆ ಸೋಮವಾರ ಅಥವಾ ಆ ಪುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ರಾಮರಾವ್,
ಸೂಪರಿಂಟೆಂಡೆಂಟ್, ಮೈಸೂರ ರೆವಿನ್ಯೂ ಸರ್ವೆ.

ಆಬ್ಕಾರಿ ಇಲಾಖೆ.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 27ನೆ ನವೆಂಬರ್ 1907, ಮೈಸೂರು.

ಈ ಕೆಳಗೆ ಕಾಣಿಸಿರುವ ಇನಾಂ ವಗೈರೆ ಗ್ರಾಮಗಳ ಮೂನ್ಯದಾರ್‌ಗೆ ಆಯಾ ಗ್ರಾಮದ ಕೇಂದಿ ಹುಟ್ಟುವಳಿ ಹಕ್ಕು ಇರುವ ವಿಚಾರದಲ್ಲಿ ಆಯಾ ಗ್ರಾಮದ ಸದರಿಗೆ ಕಾಣಿಸಿರುವ ತಾರೀಖಿನ ದಿನ ವಿಚಾರಣೆ ನಡಿಸಲ್ಪಡುತ್ತೆ.

ಆಯಾ ಗ್ರಾಮಕ್ಕೆ ಸಮ್ಬಂಧಪಟ್ಟ ಇನಾಂದಾರರುಗಳು ಖುದ್ದಾಗಿಯಾಗಲೀ ಅಥವಾ ಅವರಿಂದ ಕ್ರಮವಾದ ಮೊಖ್ತಾರ್ ನಾಮೆ ಹೊಂದಿದವರಾಗಲೀ ಹಕ್ಕು ಸ್ಥಾಪಿಸುವದಕ್ಕೆ ಅವಶ್ಯವಾದ ಸನ್ನದು, ಇನಾಂಸೆಟಲ್‌ಮೆಂಟ್ ರಿಜಸ್ತರ ಕಾಪಿ, ಟೈಟಲ್ ಡೀಡು, ಮುಚ್ಚಳಿಕೆಗಳೇ ಮುಂತಾದ ವಿಶಿಷ್ಟ ದಾಖಲೆಗಳ ಸಹಿ ಹೀರಿಂಗ್ ತಾರೀಖು ದಿವಸ ಮೈಸೂರಲ್ಲಿ ನಮ್ಮ ಆಫೀಸು ಬಳಿ ಹಾಜರಾಗತಕ್ಕದ್ದು.

ಹಾಗೆ ಹಾಜರಾಗದೇ ತಪ್ಪಿದ್ದಲ್ಲಿ ರೂಲ್ಸು ಮೇರೆ ಎಕ್ಸ್‌ಪಾರ್ಟಿ ಫೈಸಲ್ಮಾಡುತ್ತೇವಾಗಿ ಈ ಮೂಲಕ ತಿಳಿಸಿದೆ.

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಎಡತೊರೆ ..	ಅರಕೆರೆ ಕೊಪ್ಪಲ್ ...	1908ನೆ ಜನವರಿ ತಾ॥ 3.
ಡಿಟೋ ..	ಕಲ್ಲೇನಹಳ್ಳಿ ಕೊಪ್ಪಲ್ ...	
ಡಿಟೋ ..	ಚಾಮಲಾಪುರ ...	
ಡಿಟೋ ..	ಕಲ್ಲಹಳ್ಳಿ ...	
ಡಿಟೋ ..	ವಡ್ಡರಹಳ್ಳಿ ...	
ಡಿಟೋ ...	ಮೆಟ್ಟುಕೆರೆ	1908ನೆ ಜನವರಿ ತಾ॥ 4.
ಡಿಟೋ ...	ಹೊಸೂರು	
ಡಿಟೋ ..	ಯರವನುಗಾನಹಳ್ಳಿ	
ಡಿಟೋ ...	ಗುಡಗಹಳ್ಳಿ	

ತಾಲ್ಲೂಕು ಹೆಸರು.	ಇನಾಂ ಗ್ರಾಮದ ಹೆಸರು.	ಹೀರಿಂಗ್ ತಾರೀಖು.
ಹುಣಸೂರು	ಆಹ್ವಾಳಾ	
ಡಿಟೋ	ತುಂಗಾ	
ಹೆಗ್ಗಡದೇವನಕೋಟೆ	ಗಂಗಡಹೊಸಹಳ್ಳಿ	1908ನೆ ಜನವರಿ ತಾ॥ 6.
ಡಿಟೋ	ಚಕ್ಕೂರು	
ಡಿಟೋ	ಮಲಿಯೂರು	
ಡಿಟೋ	ಸ್ಯಂಕಹಳ್ಳಿ	
ಚಾಮರಾಜನಗರ	ಮೂಡ್ಲು ಅಗ್ರಹಾರ	
ಡಿಟೋ	ಉಮ್ಮತ್ತೂರು	
ಡಿಟೋ	ನವಲೂರು	1908ನೆ ಜನವರಿ ತಾ॥ 7.
ಡಿಟೋ	ಯಲ್ಲುಕೂರು	
ಡಿಟೋ	ಸಪ್ಪಯ್ಯನಪುರ	
ಡಿಟೋ	ಹಂಡರಕ್ಕಳ್ಳಿ	
ಡಿಟೋ	ಹನಹಳ್ಳಿ	1908ನೆ ಜನವರಿ ತಾ॥ 8.
ಡಿಟೋ	ಬೆಂಡರವಾಡಿ	
ಡಿಟೋ	ಕೃಷ್ಣಪುರ	
ಡಿಟೋ	ಹೆಗ್ಗೊಟಾರ	
ಡಿಟೋ	ಶಿವಪುರ	
ಡಿಟೋ	ಬೀಡರಪುರ	1908ನೆ ಜನವರಿ ತಾ॥ 9.
ಡಿಟೋ	ಹಂಗರೆಪುರ	
ಡಿಟೋ	ಪಡ್ಡಲ್‌ಕೂಡು ಹೊಸಹಳ್ಳಿ	

ಎ. ಕೆ. ಸೈಯದ್ ತಾಜ್‌ಪೀರ್ಸಾ,
ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ್, ಮೈಸೂರು.

ಫಾರೆಸ್ಟ್ ಇಲಾಖೆ.
ಸಂದಲ್ ಹರಾಜ್ ನೋಟಿಫಿಕೇಷನ್.

ತೀರ್ಮಾನ 24ನೆ ಆಗಸ್ಟ್ 1907ನೆ ಇಸವಿ.

ಕೆಳಕಂಡ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಕೈಗಂಧದ ಸಾಲಿಯಾನಾ ನಡಿಯುತ್ತಿರುವ ಹರಾಜ್‌ನ್ನು ಕೆಳಗೆ ನಮೂದಿಸಿರುವ ಕೋಣೆಗಳಲ್ಲಿ ಅದರದರ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡೆಸಲ್ಪಡುವದು.

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಸುಮಾರು ಮೊತ್ತ.
			ರೂಪಾಯಿಗಳು.
ಶಿವಮೊಗ್ಗ	ತೀರ್ಥಹಳ್ಳಿ	18ನೆ ನವೆಂಬರ್ 1907	200
ಡಿಟೋ	ಸಾಗರ	21ನೆ ಡಿಟೋ	150
ಡಿಟೋ	ಶಿವಮೊಗ್ಗ	25ನೆ ಡಿಟೋ	500
ಕಡೂರು	ತರೀಕೆರೆ	28ನೆ ಡಿಟೋ	250
ಡಿಟೋ	ಚಿಕ್ಕಮಗಳೂರು	2ನೆ ಡಿಸೆಂಬರ್ 1907	350
ಹಾಸನ	ಹಾಸನ	5ನೆ ಡಿಟೋ	150
ಬೆಂಗಳೂರು	ಬೆಂಗಳೂರು	9ನೆ ಡಿಟೋ	100
ಮೈಸೂರು	ಶ್ರೀರಂಗಪಟ್ಟಣ	12ನೆ ಡಿಟೋ	250
ಡಿಟೋ	ಹುಣಸೂರು	16ನೆ ಡಿಟೋ	500
		ಜುಮ್ಲಾ	2,450

2. ಪ್ರತಿ ಕೋಠಿಯಲ್ಲಿಯೂ ಹರಾಜಾಗುವ ಕ್ಯಾ ಸುವಾರು ಲಾಟು, ಮೊತ್ತ ಮತ್ತು ಇತರ ತಪಶೀಲುಗಳು ಬರುವ ಅಕೌಂಟ್ ಮಾಹನು ಆಫೀಸುರುನಲ್ಲಿ ತಿಳಿಯಪಡಿಸುತ್ತೆ.

ಎಂ. ಮುತ್ತಣ್ಣ,
ಕಲೆಕ್ಟರ್ ಆಫ್ ಫಾರೆಸ್ಟ್ಸ್, ಇ ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟು.
ಅಬಸ್ಟ್ರಕ್ಟ್ ನೋಟಿಫಿಕೇಷನ್.

ನೆಲಮಂಗಲದ ತಾಲ್ಲೂಕು ದಾಸನಪುರದ ಹೋಬಳಿಗೆ ಸೇರಿದ ಜೋಡಿ ಕವ್ಯಸಂದ್ರ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ನೆಲಮಂಗಲದ ತಾಲ್ಲೂಕು ಕಛೇರಿಯಲ್ಲಿ 1908ನೆ ಇಸವಿ ಜನವರಿ 6ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್, ಬಗ್ಗೆ 1907ನೆ ಇಸವಿ ಡಿಸೆಂಬರ್ 5ನೆ ಮಾರ್ಕುಂ 48ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 561ನೆ ನಂಬರ್ ಪೇಜು ನೋಡತಕ್ಕದ್ದು.

ಡಿ. ದೇವರಾಜೆ ಅರಸ್, ಡೆಪ್ಯುಟಿ ಕಮಿಷನರ್.